ಸಿ. ಸಿ. ನಂ.- 1132/2023

ಸಿ.ಡಬ್ಲ್ಯೂ.- 10 / ಪಿ.ಡಬ್ಲ್ಯೂ.- 05

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 16-06-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ನಾಗರಾಜ |
| ತಂದೆಯ ಹೆಸರು - | ಹಾಲಪ್ಪ |
| ವಯಸ್ಸು - | 50 ವರ್ಷಗಳು |
| ಉದ್ಯೋಗ - | ವ್ಯವಸಾಯ |
| ವಾಸಸ್ಥಳ - | ಪಿ.ಕೆ.ಹಳ್ಳಿ ಗ್ರಾಮ, ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಸಾಕ್ಷಿ ನಿಪಿ 2 ಪಂಚನಾಮೆ ಮೇಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿ.ಪಿ.- 2-ಸಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 3 ರಿಂದ 5 ಭಾವಚಿತ್ರದಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ದಿಃ 18.08.2023 ರಂದು ಅರ್ ಟಿ ಓ ಬಳಿ, ಓವರ್ ಹೆಡ್ ಟ್ಯಾಕ್ ಬಳಿ ಬರಲು ನನಗೆ ಚಾಸಾ 13 ರವರು ತಿಳಿಸಿದರು. ಅಲ್ಲಿ ನಾನು ಹೋದಾಗ ಪೊಲೀಸ್ ಸಿಬ್ಬಂದಿ, ಚಾಸಾ 13, ಚಾಸಾ 1 ರವರು ಇದ್ದರು. ಅಲ್ಲಿ ಚಾಸಾ ಅಪಘಾತ ಸ್ಥಳವನ್ನು ತೋರಿಸಿ ಅಲ್ಲಿ ಕಾರ್ ಬೈಕ್ ಗೆ ಗುದ್ದಿರುತ್ತದೆ ಎಂದು ತಿಳಿಸಿದರು. ಈ ಕುರಿತು ಪಂಚನಾಮೆಯನ್ನು ಜರುಗಿಸಲಾಯಿತು. ಆಗ ಸಮಯ ಸಂಜೆ 4.00 ರಿಂದ 5.00 ಗಂಟೆಯಾಗಿತ್ತು.

ನಂತರ ನಾವು ಪೊಲೀಸ ಠಾಣೆಗೆ ಹೋದೆವು. ಅಲ್ಲಿ ಬೈಕ್ ನ್ನು ಚಾಸಾ 13 ರವರು ಪೊಲೀಸರಿಗೆ ತೋರಿಸಿದರು. ಅದರಂತೆ ಜಪ್ತು ಪಂಚನಾಮೆಯನ್ನು ಜರುಗಿಸಲಾಯಿತು. ಸಾಕ್ಷಿ ನಿಪಿ 6 ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 7 ಮತ್ತು 8 ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುಂದುವರೆದು ಪೊಲೀಸರು ಇದೇನಾ ಬೈಕ್ ಎಂದು ಕೇಳಿದಕ್ಕೆ ನಾವು ಹೌದು ಎಂದು ಹೇಳಿದ್ದೇವು ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ಸಂಜೆ 5.30 ರಿಂದ 6.30 ರವರೆಗೆ ಜರುಗಿಸಲಾಯಿತು.

ಸಿ. ಸಿ. ನಂ.- 1132/2023

ಸಿ.ಡಬ್ಲ್ಯೂ.- 10 / ಪಿ.ಡಬ್ಲ್ಯೂ.- 05

ಪಾಟೀಸವಾಲು- 2 ನೇ ಆರೋಪಿ ಪರ ವಕೀಲರಾದ ಶ್ರೀ ಬಿ ಸಿ ಎಂ ರವರಿಂದ-

ನಾನು, ಆರೋಪಿ ನಂಃ 1, ಚಾಸಾ 1 ರವರು ಒಂದೇ ಸಮಾಜದವರು ಎಂದರೆ ಸರಿ. ನಾನು ಮತ್ತು ಚಾಸಾ 9 ರವರು ಒಂದೇ ಊರಿನವರು ಎಂದರೆ ಸರಿ. ಚಾಸಾ 9 ರವರು ಸಮಾಜ ಸೇವೆ ಮಾಡುತ್ತಾ ಪೊಲೀಸ ಠಾಣೆಗೆ ಆಗಾಗ ಓಡಾಡುತ್ತಾರೆ ಎಂದರೆ ಸರಿಯಲ್ಲ. ಆ ದಿನ ಚಾಸಾ 9 ರವರನ್ನು ಪಂಚನಾಮೆಗೆ ನಾನು ಕರೆದುಕೊಂಡು ಹೋಗಿದ್ದೆ. ಚಾಸಾ 13 ರವರು ತಿಳಿಸಿದಕ್ಕೆ ನಾನು ಹೋಗಿದ್ದೆ. ಚಾಸಾ 13 ರವರು ಹೇಳಿದಕ್ಕೆ ಮೃತ ಆರೋಪಿ ನಂಃ 1 ರವರು ಮೃತಪಟ್ಟಿದ್ದರಿಂದ ನಾನು ಪಂಚನಾಮೆಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಚಾಸಾ 13 ರವರು ಕರೆದು ಹೇಳಿದಕ್ಕೆ ನಾನು ಪಂಚನಾಮೆಗಳಿಗೆ ಸಹಿ ಮಾಡಿದ್ದೆ ಎಂದರೆ ಸಾಕ್ಷಿ ಅಲ್ಲಿ ಅಪಘಾತಆಗಿದ್ದು ನಿಜ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಪೂರ್ವಕ್ಕೆ ಓವರ್ ಹೆಡ್ ಟ್ಯಾಕ್, ಪಶ್ಚಿಮಕ್ಕೆ ಚೆಕ್ ಪೊಸ್ಟ್ ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ.

ಸಾಕ್ಷಿ ನಿಪಿ 7 ಮತ್ತು 8 ಭಾವಚಿತ್ರಗಳಲ್ಲಿರುವ ವಾಹನಗಳನ್ನು ನೋಡಿ ಗುರುತಿಸಿ ಅದರಲ್ಲಿ ಮೃತ ಆರೋಪಿ ನಂಃ 1 ರವರು ಹೋಗುತ್ತಿದ್ದರು ಎಂದು ಚಾಸಾ 13 ರವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮೊ.ಸೈ ನ ಮುಂದಿನ ಗಾಲಿ ಹಾಗೂ ಹ್ಯಾಂಡಲ್ ಬೆಂಡ್ ಆಗಿದೆ ಎಂದರೆ ಸರಿ. ಸದರಿ ವಾಹನದ ಹಿಂದಿನ ಭಾಗ ಜಖಂಗೊಡಿಲ್ಲ ಎಂದರೆ ಸರಿ. ನಿಪಿ 7 ಮತ್ತು 8 ಭಾವಚಿತ್ರಗಳಲ್ಲಿನ ವಾಹನವು ಸುಮಾರು 15 ವರ್ಷಗಳ ಹಿಂದೆ ಬ್ಯಾನ್ ಆಗಿದ್ದು ಇಗ ಈ ವಾಹನಗಳು ಇಲ್ಲ ಎಂದರೆ ಸರಿ. ಎರಡೂ ಪಂಚನಾಮೆಗಳಲ್ಲಿ ಬರೆದಿರುವ ಸಂಪೂರ್ಣ ಮಾಹಿತಿ ನನಗೆ ಹೇಳಲಾಗುವುದಿಲ್ಲ. ಪೊಲೀಸರ ಸೂಚನೆಯಂತೆ ಚಾಸಾ 13 ರವರು ಅಲ್ಲಿಯೆ ಇದ್ದರಿಂದ ಪಂಚನಾಮೆಗಳಿಗೆ ನಾನು ಮತ್ತು ಚಾಸಾ 9 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿ. ಭಾವಚಿತ್ರಗಳನ್ನು ಯಾವ ಕ್ಯಾಮರಾದಲ್ಲಿ ತೆಗೆಸಲಾಗಿತ್ತು ಎಂದು ಹೇಳಲಾಗವುದಿಲ್ಲ. ನಾನು ಸ್ಥಳಕ್ಕೆ ಹೋಗದೆ ಇದ್ದರು, ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.
ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.